ನಮ್ಮ ಆದರ್ಶಗಳು ಅತ್ಯುನ್ನತವಾಗಿರಬೇಕು; ಹಾಗಾದರೆ ಮಾತ್ರ ನಾವು ಮಹತ್ತನ್ನು ಸಾಧಿಸಲು ಸಾಧ್ಯ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಎಲ್ಲ ವ್ಯಕ್ತಿಗಳೂ ಅತ್ಯುನ್ನತ ಆದರ್ಶವನ್ನು, ಪರಿಪೂರ್ಣತೆಯನ್ನು ಅದರ ಅತ್ಯುನ್ನತ ಹಂತದಲ್ಲಿ ಪಡೆಯುವುದು ಸಾಧ್ಯವಾಗದಿರಬಹುದು. ಆದರೆ, 'ಆದರ್ಶವನ್ನು ಎಂದಿಗೂ ಕೆಳಗೆ ಎಳೆಯಬೇಡಿ' ಎನ್ನುತ್ತಾರೆ ಸ್ವಾಮೀಜಿ. ಸಾವಿರದಲ್ಲಿ ಒಬ್ಬನಾದರೂ ಗುರಿ ತಲುಪಬಹುದು; ಆದರೆ ಅದಕ್ಕೆ ಉಳಿದ ಎಲ್ಲರ ಹೋರಾಟ ಸೋಪಾನವಾಗುವುದು. ಆದರೆ ಆದರ್ಶ, ಗುರಿ ಸಣ್ಣದಾಗಿದ್ದರೆ, ನಾವು ತಲುಪುವ ಗುರಿಯೂ ಅಲ್ಪವೆ, ನಮ್ಮ ಸಾಧನೆಯೂ ಅತ್ಯಲ್ಪವೆ. ಇಂಥ ಸೀಮಿತತೆಯಿಂದ ನಾವು ತೃಪ್ತರಾಗುವುದಿಲ್ಲ. ಏಕೆಂದರೆ ನಮ್ಮ ಪರಂಪರೆ ನಮಗೆ ಕಲಿಸಿದ ಗುಣವೇ ಇದು – 'ಎಲ್ಲವನ್ನೂ ಮೀರಿ ಹೋಗು'. ಆತ್ಯಂತಿಕವಾದ, ಪರಿಪೂರ್ಣವಾದ ಒಂದು ನೆಲೆಯನ್ನು ತಲುಪಿದಲ್ಲದೆ ನಾವು ವಿರಮಿಸಲಾರೆವು.

**ಆಧುನಿಕತೆಗೆ ಅಭಿಮುಖವಾಗಿ :** ಪರಿಪೂರ್ಣತೆಯನ್ನು ಅರಿತುಕೊಳ್ಳುವ ಹಂತದಲ್ಲಿ ಹಲವು ಅಡೆತಡೆಗಳಿದ್ದರೂ, ಅನುಭವದಿಂದ ಕಲಿಯುವ ಪಾಠ ನಮ್ಮನ್ನು ಗುರಿಯತ್ತ ಕರೆದೊಯ್ಯುವುದು. ಭೌತಿಕ ಜಗತ್ತಿನ ಹತ್ತು ಹಲವು ವಿಷಯಗಳ ಬಗ್ಗೆ ನಿರಂತರ ಸಂಶೋಧನೆ ನಡೆಸುತ್ತಿರುವ ವೈಜ್ಞಾನಿಕ ಕ್ಷೇತ್ರದಲ್ಲಿ, ಭೌತಿಕ ಮಿತಿಯಾಚೆ ಸಾಗುವ ವಿದ್ಯಮಾನ ಹಲವು ಬಾರಿ ನಡೆದಿದೆ. (ಈಚೆಗೆ ಚರ್ಚೆಗೊಳಗಾದ 'ದೇವಕಣ'ದ ಸಂಶೋಧನೆ ಇದಕ್ಕೆ ಉತ್ತಮ ಉದಾಹರಣೆ.) ಆದರೆ ಅಂತರಂಗದ ಅನ್ವೇಷಣೆಗೆ ವೈಜ್ಞಾನಿಕ ಮನೋಭಾವದ ಮನಸ್ಸು ತೆರೆದುಕೊಂಡಲ್ಲದೆ ಭೌತಿಕ ಪ್ರಪಂಚದ ಆಧ್ಯಾತ್ಮಿಕ ಆಯಾಮ ಗೋಚರವಾಗದು ಎಂಬ ಸತ್ಯ ಇಂದಿಗೂ ಪ್ರಸ್ತುತವೆ. ವೈಯಕ್ತಿಕ ಅಭಿಪ್ರಾಯದ ನೆಲೆಯಲ್ಲಿ ಮಾತ್ರ ಸ್ವೀಕೃತವಾಗುವ ಆಧ್ಯಾತ್ಮಿಕ ಆಯಾಮ ಸಾರ್ವತ್ರಿಕವಾಗುವುದು ಹೇಗೆ ಎನ್ನುವುದೇ ಆಧುನಿಕ ಜಗತ್ತಿನಲ್ಲಿ ಒಂದು ಸವಾಲು. ಆಧ್ಯಾತ್ಮಿಕತೆಯನ್ನೇ ಒಪ್ಪದ ಮನೋಭಾವದವರಿಗೂ ಧರ್ಮವನ್ನು ವೈಜ್ಞಾನಿಕ ಭಾಷೆಯಲ್ಲಿ ಅರ್ಥವಾಗುವಂತೆ ವಿವರಿಸಿಕೊಟ್ಟ ಸ್ವಾಮಿ ವಿವೇಕಾನಂದರ ವಿಧಾನ ಅತ್ಯಂತ ಪ್ರಸ್ತುತವಾಗುವುದು ಇಲ್ಲಿ. ಆಧುನಿಕ ಪ್ರವೃತ್ತಿಗೆ ಒಗ್ಗುವ ಆದರ್ಶವನ್ನು ಅತ್ಯಂತ ಸಮರ್ಪಕವಾಗಿ ಹಾಕಿಕೊಟ್ಟ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಪರಿಪೂರ್ಣತೆಯನ್ನು ಕುರಿತು ಚಿಂತಿಸುವಾಗ ಮೂಡಿಬಂದ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಬಹುದು: ೧) ಬಾಲ್ಯದಲ್ಲಿ ಆದರ್ಶಗಳು ರೂಪುಗೊಳ್ಳುತ್ತವೆ; ಅಲ್ಲೇ ಪರಿಪೂರ್ಣತೆಯ ಕನಸು ಮೂಡುತ್ತದೆ. ೨) ಬಾಹ್ಯಪ್ರಪಂಚವನ್ನು ದಾಟಿ ಹೋಗಿ, ಅವ್ಯಕ್ತತೆಯ ಕಡೆಗೆ ಹೊರಳಿದಾಗಲೇ ಪರಿಪೂರ್ಣತೆಯ ಆದರ್ಶ ಕಂಡುಬರುವುದು. ೩) ದಿವ್ಯತೆಯ ಸ್ಪರ್ಶದಿಂದ ನಮ್ಮ ಜನಜೀವನದಲ್ಲೆಲ್ಲ ಆಧ್ಯಾತ್ಮಿಕ ಆದರ್ಶ ಅತ್ಯುನ್ನತವೆಂಬುದು ನೆಲೆನಿಂತಿತು. ೪) ವ್ಯಕ್ತಿಯ ಆದರ್ಶ ಆಧ್ಯಾತ್ಮಿಕವಾಗುವುದು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದ ಒಂದು ಪ್ರಮುಖ ಬದಲಾವಣೆ. ೫) ಅವ್ಯಕ್ತ ಅನುಭವ ಪಡೆದ ಮಹಾತ್ಮರ ಜೀವನವೇ ನಮ್ಮ ಅತ್ಯುಚ್ಚ ಆದರ್ಶ. ೬) ಆಧುನಿಕ ವೈಜ್ಞಾನಿಕ ಮನೋಭಾವವೂ ಆಧ್ಯಾತ್ಮಿಕ ಆದರ್ಶವನ್ನು ಹೊಂದುವ ಅಗತ್ಯವಿದೆ.

ಪರಿಪೂರ್ಣತೆಯನ್ನು ಕುರಿತು ಚಿಂತಿಸುವಾಗ ಅಗಾಧ ಅರ್ಥಗಳನ್ನು ಹೊಮ್ಮಿಸಬಲ್ಲ ಪ್ರಸಿದ್ಧ ಶಾಂತಿಮಂತ್ರವನ್ನು ಮರೆಯಲಾದೀತೆ?

**ಓಂ । ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥**
ಓಂ ಶಾಂತಿಃ ಶಾಂತಿಃ ಶಾಂತಿಃ ॥

## ಸ್ವಾಮಿ ತುರೀಯಾನಂದರು ಹೇಳಿದ ಕಥೆ

**ಒಮ್ಮೆ ನಾರದರು ವಿಷ್ಣುವನ್ನು ಆತನ ಅತ್ಯಂತ ದೊಡ್ಡ ಭಕ್ತನು ಯಾರೆಂದು ಕೇಳಿದನು. ಉತ್ತರ ಕೊಡುತ್ತಾ ದೇವರು ಹೀಗೆಂದನು: "ಇಂಥಾ ಹಳ್ಳಿಯಲ್ಲಿ ಒಬ್ಬ ರೈತನಿದ್ದಾನೆ. ಅವನೇ ನನ್ನ ಅತ್ಯಂತ ಹತ್ತಿರದ ಭಕ್ತ. ಹೋಗಿ ಅವನನ್ನೊಮ್ಮೆ ನೋಡಿ ಬಾ." ನಾರದ ಆ ಸ್ಥಳಕ್ಕೆ ಹೋದಾಗ ರೈತ ಹೊಲಕ್ಕೆ ಹೋಗಿದ್ದನು. ಸಂಜೆ ರೈತ ಮನೆಗೆ ಹಿಂದಿರುಗಿ ಭಗವನ್ನಾಮವನ್ನೊಮ್ಮೆ ಉಚ್ಚರಿಸಿ, ನಂತರ ಮಲಗಲು ಹೋದನು. ಇದನ್ನೆಲ್ಲಾ ನೋಡಿದ ನಾರದರು ಭಗವಂತನ ಬಳಿಗೆ ಹಿಂದಿರುಗಿ ಬಂದು, 'ಇದು ಹೇಗೆ ಭಗವಾನ್? ಇಡೀ ದಿನವೆಲ್ಲಾ ಕ್ಷುದ್ರವಾದ ಪ್ರಾಪಂಚಿಕೋದ್ಯಮದಲ್ಲಿ ಮುಳುಗಿ, ಒಮ್ಮೆ ಮಾತ್ರ ನಿನ್ನ ನಾಮವನ್ನುಚ್ಚರಿಸಿದ ಮಾತ್ರಕ್ಕೆ ಆ ರೈತ ನಿನ್ನ ಭಕ್ತಾಗ್ರಣಿಯಾಗುವುದೆಂದರೇನು?' ಎಂದರು. ಭಗವಂತನು ನಾರದರಿಗೆ, 'ಸರಿ ನಾರದ, ನಿನ್ನ ಪ್ರಶ್ನೆಗೆ ಬೇಗ ಉತ್ತರ ದೊರಕುವುದು. ಪೂರ್ತಿ ತುಂಬಿರುವ ಈ ಎಣ್ಣೆ ಬಟ್ಟಲನ್ನು ತೆಗೆದುಕೊಂಡು ಪ್ರಪಂಚವನ್ನೆಲ್ಲಾ ಬಳಸಿಕೊಂಡು ಬಾ' ಎಂದನು. ನಾರದರು ಎಚ್ಚರಿಕೆಯಿಂದ ಪ್ರಪಂಚವನ್ನೆಲ್ಲಾ ಬಳಸಿ ಹಿಂದಿರುಗಿ ಬಂದರು. ಆಗ ವಿಷ್ಣು ನಾರದರನ್ನು, 'ಸರಿ ನಾರದ, ನೀನು ಎಷ್ಟು ಬಾರಿ ನನ್ನನ್ನು ನೆನೆಸಿಕೊಂಡೆ?' ಎಂದು ಕೇಳಿದನು. ನಾರದರು, 'ನಾನು ಹೇಗೆ ನಿನ್ನನ್ನು ಸ್ಮರಿಸಲಿ? ನನ್ನ ಲಕ್ಷ್ಯವೆಲ್ಲಾ ಎಣ್ಣೆಯ ಕಡೆಗಿತ್ತು' ಎಂದರು. ಅದಕ್ಕೆ ವಿಷ್ಣು, 'ಸರಿ, ಎಣ್ಣೆ ಎಲ್ಲಿ ಬಟ್ಟಲಿನಿಂದ ಚೆಲ್ಲಿಹೋಗುವುದೋ ಎಂಬ ಚಿಂತೆಯಲ್ಲಿ ನೀನು ಒಮ್ಮೆ ಕೂಡ ನನ್ನನ್ನು ನೆನೆಸಿಕೊಳ್ಳಲಿಲ್ಲ. ಆ ರೈತನಾದರೋ ಇಡೀ ದಿನವೆಲ್ಲಾ ಕೆಲಸದಲ್ಲಿ ಮುಳುಗಿಹೋಗಿದ್ದರೂ ಕೂಡ ಪ್ರತಿ ದಿನವೂ ತನ್ನ ನಿತ್ಯಕೆಲಸವಾದ ನಂತರ ತಪ್ಪದೆ ನನ್ನನ್ನು ಜ್ಞಾಪಿಸಿಕೊಳ್ಳುವನು. ಈಗ ನೀನೇ ಹೇಳು, ಅವನು ಭಕ್ತಶ್ರೇಷ್ಠನಲ್ಲವೆ?' ಎಂದನು.**

*('ಸಾಧಕನ ಕೈದೀವಿಗೆ' ಗ್ರಂಥದಿಂದ, ಪು.೬೩)*